# ಹಾವು ಬಂತಲೇ ಹಾವು



**ಮನೆಯ ಹಿತ್ತಲಿನಲ್ಲಿ ಕಟ್ಟಿಗೆ ರಾಶಿ ನಡುವೆ ಸೇರಿಕೊಂಡಿದ್ದ ಆ ಹಾವು ಏನೆಲ್ಲಾ ಅವಾಂತರಗಳಿಗೆ ಕಾರಣವಾಯ್ತು ಗೊತ್ತೇ?**

**■ ರೂಪಾ ಜೋಶಿ**

ಸಂಜೆ ನಾಲ್ಕು ಹೊಡೆದರೂ ಇನ್ನೂ ತಂಪಾಗದ ಬಿರುಬಿಸಿಲಿಗೆ ಮನೆಯೊಳಗೆ ಉಸಿರು ಕಟ್ಟಿದಂತಾಗಿತ್ತು. ಖುರ್ಚಿ ಸಮೇತ ಹೊರಬಂದು ಎದುರಿನ ರಸ್ತೆಯ ಮೇಲೆ ಬರುವವರು ಹೋಗುವವರನ್ನು ನೋಡುತ್ತ, ಪರಿಚಿತರನ್ನು ನೋಡಿ ಹಲ್ಲು ಕಿರಿಯುತ್ತ, 'ಚಾ ಆತ್ರಿ?' ಎಂದು ಯಾಂತ್ರಿಕವಾಗಿ ಕೇಳುತ್ತ, ಹೊತ್ತು ಕಳೆಯುತ್ತ ಕುಳಿತಿದ್ದೆ.

ಎದುರು ಮನೆಯ ಪುಟ್ಯಾ ಯಾಕೋ ಅವಸರದಿಂದ ಓಡುತ್ತ ಹೊರಟಿದ್ದು ಕಂಡು ಕುತೂಹಲ ಹಣಕಿತು. 'ಯಾಕಪಾ ಹಂಗ್ಯಾಕ ಓಡ್ಹೋತ ಹೊಂಟಿ?' ಎಂದದ್ದೇ, ಆತ 'ಅಯ್ಯೋ ಆಂಟೀರಿ ಗೊತ್ತಿಲ್ರಿ ನಿಮ್ಗ? ಆ ಬಾಜೂಕಿನ ಓಣಿ ಮಂಜಾನ ಮನೀ ಹಿತ್ತಲದಾಗ ಹಾಂವು ಕುಂತೇತಂತ' ಎಂದು ಗಡಬಡಿಸಿ ಓಡಿದ. ಅಗ್ದೀ ಇಂವನೇ ಹಾವು ಹಿಡಿದು ಗಬಕ್ಕನೆ ಚೀಲ ತುಂಬುತ್ತಾನೋ ಎಂಬಂತಿತ್ತು ಅವನ ಭಾವ–ಭಂಗಿ. ಅಲ್ಲ, ಈ ಮಂಜಾ ಯಾರು? ಮೆಲ್ಲಗೆ ಆ ಓಣಿಯ ನಕ್ಷೆಯನ್ನು ಮನದಲ್ಲೇ ಬಿಚ್ಚಿ ಹರವಿ ಹುಡುಕಿದೆ.

ಓ ಆ ರೊಟ್ಟಿ ಶಾಂತಕ್ಕನ ಮಗ! ಥಟ್ಟನೆ ಹೊಳೆಯಿತು. ಪಾಪ, ಇಡೀ ದಿನಾ ರೊಟ್ಟಿ ತಟ್ಗೋತ, ಅದೇ ದುಡಿಮಿ ಮ್ಯಾಲ ಮನೀ ಸಾಗಸ್ತಾಳ. ಎರಡು ಮೂರು ಮಕ್ಕಳನ್ನ ಕಟ್ಗೊಂಡು ಆ ಲಡಕಾಸಿ ಮನೆಯಲ್ಲಿ ಜೀವನಾ ನಡಸ್ತಾಳ. ಮನಸ್ಸು ಪಿಚ್ ಅಂತು. ನನಗೂ ಮುಂಜಾನಿಂದ ಕುಂತು ಕುಂತು ಬೇಸರ ಬಂದಿದ್ದಕ್ಕೋ ಏನೋ, ಒಂದು ನಾಕ್ ಹೆಜ್ಜೆ ಹೋಗಿ ಬಂದರಾತು. ಅಲ್ಲಿ ಹಣಕಿ ತಾಜಾ ಬಾತ್ಮಿ ತಿಳಕೊಂಡು ಬಂದರಾತು ಅನ್ನಿಸಿ ಹೊರಟೇಬಿಟ್ಟೆ.

ಎಂಥ ಹಾವಿರಬಹುದು? ಮಿಡಿ ನಾಗರವೆ? ಸರ್ಪವೆ? ಅದೆಂಥದೋ ಕೊಳಕುಮಂಡಲ ಅಂತಾರಲ್ಲ, ಅದೆ? ಅಥವಾ ನಮ್ಮ ಬಾಸ್‌ನ ಬುದ್ಧಿಯ ಎರಡು ತಲೆ ಹಾವೆ? ನನ್ನ ಲೆಕ್ಕಾಚಾರ ತುದಿಬುಡವಿಲ್ಲದೇ ಸಾಗಿತ್ತು. ಛೇ, ಈ ಪಟ್ಟಣದಲ್ಲಿ ಅಂಥ ಘನಂದಾರಿ ಹಾವು ಹುಟ್ಟಿ ಬೆಳೆಯಲು ಸಾಧ್ಯವೆ? ಇರಲಿಕ್ಕಿಲ್ಲ. ಯಾವುದೋ ಸಾದಾ ಇರಬಹುದು. ಆದರೂ ಇಷ್ಟು ದೊಡ್ಡ ದೇಹದ ಮನುಷ್ಯ, ಆ ಚೋಟುದ್ದ ಹಾವಿಗೆ ಹೆದರೋದು ಯಾಕೋ ಬರೀ ಅಂಜುಬುರುಕರು ಎಂದು ಮನದಲ್ಲೇ ನಕ್ಕೆ. 'ಹೂಂ... ಸೆಕೆ ಸೆಕೆ ಅಂತ ರಾತ್ರಿಯಲ್ಲಿ ಇಷ್ಟಗಲ ಕಿಟಕಿ ತೆಗೆದು ಮಲಗ್ತೀಯಲ್ಲ.